## ಧಾರಾವಾಹಿಯಲ್ಲಿ ತೀರ್ಥಯಾತ್ರೆ

ಝಿ ಕನ್ನಡದಲ್ಲಿ ಪ್ರಯಾಗರಾಜ ಕುಂಭಮೇಳ ದರ್ಶನ ಮಾಡಿಸುವ ಮೂಲಕ ನಮ್ಮಂತಹ ಹಿರಿಯ ನಾಗರಿಕರನ್ನು ಸಂತೋಷಪಡಿಸಿದ್ದಾರೆ. ನನ್ನಂಥವರಿಗೆ ಧಾರ್ಮಿಕ ಸ್ಥಳಗಳನ್ನು ನೋಡಬೇಕೆಂದು ಆಸೆ ಇದ್ದರೂ ಆರೋಗ್ಯ ಇನ್ನಿತರ ಕಾರಣಗಳಿಂದ ಅದು ಸಾಧ್ಯವಾಗುತ್ತಿಲ್ಲ. ಈ ತರಹ ಧಾರಾವಾಹಿಗಳಲ್ಲಿ ಧಾರ್ಮಿಕ ಸ್ಥಳಗಳನ್ನು ಅವಕಾಶ ಸಿಕ್ಕಾಗ ತೋರಿಸಿದರೆ ಸಂತೋಷ ಆಗುತ್ತೆ. ಈ ಹಿಂದೆ ಒಂದು ಧಾರಾವಾಹಿಯಲ್ಲಿ ಹೃಷಿಕೇಶ, ಹರಿದ್ವಾರ, ವಾರಣಾಸಿಯನ್ನು ತೋರಿಸಿದ್ದರು.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಹಾಸ್ಯ ನಟನ ವಿರಾಟ ಪ್ರತಿಭೆ

ಚಂದನ ವಾಹಿನಿಯಲ್ಲಿ ಚಿತ್ರರಂಗದ ಪ್ರತಿಭೆಗಳ ‘ಕಲಾ ಜಗತ್ತು’ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಈ ವಾರ ಅಭಿನಯ ಚಾಣಕ್ಯ ಮುಸುರಿ ಕೃಷ್ಣಮೂರ್ತಿ ಕುರಿತು ಕಾರ್ಯಕ್ರಮ ರೂಪಿಸಿದ್ದರು. ಅವರ ಅಭಿನಯಿಸಿದ ಸಿನಿಮಾದ ಕೆಲವು ದೃಶ್ಯಗಳನ್ನು ಬಿತ್ತರಿಸಲಾಯಿತು.

‘ಉಪಾಸನೆ’ ಸಿನಿಮಾದ ಮೂಲಕ ಪದಾರ್ಪಣೆ ಮಾಡಿದ ಅವರು, ಅದರಲ್ಲಿ ಕಪಟ ಸಂಗೀತಗಾರನಾಗಿ ತಮ್ಮ ವಿಶಿಷ್ಟ ಧ್ವನಿ, ಆಂಗಿಕ ಅಭಿನಯದಿಂದ ಪ್ರೇಕ್ಷಕರ ಹೃದಯ ಗೆದ್ದರು. ವಿದೂಷಕ, ಖಳನಟ, ಪೋಷಕ ಪಾತ್ರಗಳನ್ನೂ ಅವರು ಅದ್ಭುತವಾಗಿ ಮಾಡಿದ್ದಾರೆ. ರಂಗ ಗೀತೆಗಳನ್ನು ಹಾಡುವ ಅವರು 155 ಚಿತ್ರಗಳಲ್ಲಿ ನಟಿಸಿರುವುದು ದೊಡ್ಡ ಸಾಧನೆಯೇ ಸರಿ. ಇಂತಹ ಚಂದದ ಕಾರ್ಯಕ್ರಮ ನೀಡುತ್ತಿರುವುದು ಶ್ಲಾಘನೀಯ.

—ಭಾರತೀ ಗಂಗಾಧರ್, ಬೆಂಗಳೂರು

## ಕಿರಿಕಿರಿ ಪಾತ್ರ

ಝೀ ಕನ್ನಡದ ‘ಶ್ರಾವಣಿ ಸುಬ್ರಹ್ಮಣ್ಯ’ದ ಕಾಂತಮ್ಮ, ಸುಂದರ ತಾಯಿಯ ಅಭಿನಯ ನೋಡುವುದನ್ನು ಸಹಿಸಲು ಅಸಾಧ್ಯ. ಅವರ ಅಂಗಚೇಷ್ಟೆಯೇ ಹಾಸ್ಯ ಎಂದುಕೊಂಡಂತೆ ಅನ್ನಿಸುತ್ತಿದೆ. ಆದಷ್ಟು ಬೇಗ ಇವರಿಬ್ಬರ ಪಾತ್ರಗಳನ್ನು ಮುಗಿಸಿ. ಧಾರಾವಾಹಿಯನ್ನು ಮುಂದುವರಿಸಬೇಕೆಂದು ವಿನಂತಿ. ಇಲ್ಲದಿದ್ದರೆ ನೋಡುವುದು ತುಂಬ ಕಷ್ಟ ಅನ್ನಿಸುತ್ತದೆ.

—ವಸಂತ ನಾಗರಾಜ್, ಬೆಂಗಳೂರು

ವಾರದ ಪತ್ರ

## ವಾಹಿನಿಯ ಕೈಯಲ್ಲೇ ರಿಮೋಟ್!

ಈಗೀಗ ಕಲರ್ಸ್ ಕನ್ನಡದ ಕೆಲವು ಧಾರಾವಾಹಿಗಳ ಸಮಯ ಬದಲಾವಣೆ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ವೀಕ್ಷಕರ ಕೈಯಲ್ಲಿದ್ದ ರಿಮೋಟನ್ನು ವಾಹಿನಿಯೇ ತೆಗೆದುಕೊಂಡು ಈ ಬದಲಾವಣೆ ಮಾಡುತ್ತಿರುವಂತೆ ಕಾಣುತ್ತಿದೆ. ಪಾರಂಪರಿಕವಾಗಿ ‘ಕರಿಮಣಿ’ ಮುತ್ತೈದೆಯರ ಸಂಕೇತ. ಆದರದು ಗೃಹಿಣಿಗಷ್ಟೇ ಸೀಮಿತ ಎನ್ನುವಂತಾಗಿದೆ. ಗಂಡಸರಿಗೆ ಸಮಾನವಾಗಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಅದು ಅಷ್ಟಕ್ಕಷ್ಟೇ. ಏಕೆಂದರೆ ದುಡಿಮೆಗೆ ತೆರಳುವ ಸಾಕಷ್ಟು ಮಹಿಳೆಯರು ಕರಿಮಣಿ ಧರಿಸುವುದಿಲ್ಲ.

‘ದೃಷ್ಟಿ ಬೊಟ್ಟು’ ಚೆಂದದ ಮಕ್ಕಳಿಗೆ ಇಡುತ್ತಿದ್ದರು. ಆದ್ರೆ ಈ ಧಾರಾವಾಹಿಯಲ್ಲಿ ನಾಯಕಿಗೆ ಇಟ್ಟಿದ್ದಾರೆ. ನಾಯಕನ ಪಾತ್ರ ದಾದಾಗಿರಿಯಿಂದ ಕೂಡಿರುವುದು ಕೆಟ್ಟದಾಗಿದೆ. ‘ನೂರು ಜನ್ಮಕೂ’ ಸಾಗುವುದನ್ನು ನೋಡಿದರೆ ಮಾಟ, ಮಂತ್ರ, ಭೂತಗಳ ಕಥೆ ಆಧಾರಿತ ಸಿನಿಮಾಗಳನ್ನು ನೋಡಿದಂತಾಗಿದೆ. ಈ ಹಿಂದೆ ಕೆಲವು ಧಾರಾವಾಹಿಗಳಲ್ಲಿ ಕೋರ್ಟು ಕಚೇರಿ ದೃಶ್ಯಗಳು ಚೆನ್ನಾಗಿರುತ್ತವೆ. ‘ವಧು’, ‘ಯಜಮಾನ’, ‘ಭಾರ್ಗವಿ ಎಲ್‌ಎಲ್‌ಬಿ’ ವೀಕ್ಷಕರಿಗೆ ಖುಷಿಯ ವಿಷಯ.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಮೆಚ್ಚುಗೆಯಾದ ಸರಳತೆ

ಚಂದನದ ‘ಶುಭೋದಯ ಕರ್ನಾಟಕ’ ಒಳ್ಳೆಯ ಸಾಧಕರನ್ನು ಪರಿಚಯಿಸುವ ಅರ್ಥಪೂರ್ಣ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಹೆಮ್ಮೆಯ ತಬಲಾ ಕಲಾವಿದ ಗುರುಮೂರ್ತಿ ವೈದ್ಯ ಭಾಗವಹಿಸಿದ್ದರು. ಚಂದನದಲ್ಲಿ ಪ್ರಸಾರವಾಗುವ ಬಹುತೇಕ ಸಂಗೀತ ಕಾರ್ಯಕ್ರಮಗಳಲ್ಲಿ ಅವರ ತಬಲಾ ವಾದನವನ್ನಷ್ಟೇ ನೋಡುವ ವೀಕ್ಷಕರಿಗೆ ಅವರ ಮಾತುಗಳನ್ನೂ ಕೇಳುವ ಅವಕಾಶ ಈ ಮೂಲಕ ದೊರೆತಂತೆ ಆಯಿತು. ಪಂಡಿತ್ ರವೀಂದ್ರ ಯಾವಗಲ್ ಹಾಗೂ ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಅವರ ಮಾರ್ಗದರ್ಶನದಲ್ಲಿ ಬೆಳೆದ ಗುರುಮೂರ್ತಿ ಜನಮನ್ನಣೆ ಪಡೆದ ಕಲಾವಿದ.

—ತಾರಾ ಹೆಗಡೆ ಸಿರಸಿ

## ಶಿವಮಯ ಸಂಗೀತ

ಝೀ ಕನ್ನಡದ ‘ಸರಿಗಮಪ’ದಲ್ಲಿ ಗಾಯಕರಿಬ್ಬರ ‘ಜುಗಲಬಂದಿ’ ವಿಶೇಷವಾಗಿತ್ತು. ಗಾಯಕರು ತುಂಬಾ ಚೆನ್ನಾಗಿ ಹಾಡಿ ತಮ್ಮ ಸ್ಥಾನ ಭದ್ರ ಪಡಿಸಿಕೊಳ್ಳುವ ಜಿದ್ದಾಜಿದ್ದಿ ಚೆನ್ನಾಗಿತ್ತು. ವಿಜಯ್ ಪ್ರಕಾಶ್ ಹುಟ್ಟುಹಬ್ಬದ ಪ್ರಯುಕ್ತ ಮೈಮರೆತು ಶಿವ ಪಂಚಾಕ್ಷರಿ ಮಂತ್ರ ಹಾಗೂ ಈಶ್ವರನ ಕುರಿತು ಹಾಡಿದ್ದು ಸಂಪೂರ್ಣ ವೇದಿಕೆಯೇ ಶಿವಮಯವಾಗಿತ್ತು.

—ಬಿ. ಗಂಗಾಧರ್, ಬೆಂಗಳೂರು

## ಅತ್ತೆ ಸೊಸೆ ಹೀಗೂ ಇರ್ತಾರಾ

ಕಲರ್ಸ್ ಕನ್ನಡದ ‘ಭಾಗ್ಯಲಕ್ಷ್ಮೀ’ ಆರಂಭದಲ್ಲಿ ಚೆನ್ನಾಗಿತ್ತು. ಕ್ರಮೇಣ ಏಕತಾನತೆಯಿಂದ ಸಾರವೇ ಇಲ್ಲದಂತೆ ಕಾಣಿಸುತ್ತಿದೆ. ಈಗದು ಹಳಸಲು ಕತೆ ಎಂದೆನಿಸುತ್ತದೆ. ಅತ್ತೆ–ಸೊಸೆ ಸೇರಿ ಶ್ರೇಷ್ಠಾಳ ಕಪಾಳಕ್ಕೆ ಬಾರಿಸುವುದು ಬಿಟ್ಟರೆ ಕತೆಯಲ್ಲಿ ವಿಶೇಷವೇನಿಲ್ಲ. ಆಶ್ಚರ್ಯವೆಂಬಂತೆ ಕತೆಗೆ ಹೊಸ ತಿರುವು ನೀಡಿದ್ದಾರೆ. ಅತ್ತೆ, ಗಂಡನ ಎದುರು ಭಾಗ್ಯಾ ಆಡುವ ಮಾತುಗಳು ಅರ್ಥಪೂರ್ಣವಾಗಿವೆ. ತಾಳಿ ಕಟ್ಟಿದ ಗಂಡನ ಎದುರಿನಲ್ಲೇ ತನಗೆ ಈ ತಾಳಿ ಭಾರವಾಗುತ್ತಿದೆ. ಅವರ ಪಾಡಿಗೆ ಅವರನ್ನು ಬಿಟ್ಟುಬಿಡೋಣ ಎಂದು ತಾಳಿಯನ್ನು ಗಂಡನ ಕೈಗೆ ಇಡುವುದು ಮಾರ್ಮಿಕವಾಗಿದೆ.

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಬಹುಮಾನದ ವಿಷಯ ಬಹಿರಂಗವಾಗಲಿ

ಕಲರ್ಸ್ ಕನ್ನಡದಲ್ಲಿ ಕೆಲ ಹೊಸ ಧಾರಾವಾಹಿಗಳು ಪ್ರಾರಂಭವಾಗಿವೆ. ಕೆಲವು ದಿಢೀರ್ ಎಂದು ಕಾಲ್ಕಿತ್ತಿವೆ. ಇದಕ್ಕೆ ಕಾರಣ ಜೊಳ್ಳು ಜೊಳ್ಳಾದ ಕಥೆಗಳು. ವೀಕ್ಷಕರಿಗೆ ಮೇಕಪ್ ಬಾಕ್ಸ್, ಸೀರೆ, ಟೀವಿ, ಚಿನ್ನದ ನಾಣ್ಯ ಹೀಗೆ ಏನೇನೋ ಉಡುಗೊರೆ ಕೊಡ್ತೀವಿ, ಧಾರಾವಾಹಿ ನೋಡಿ ಎಂದು ಆಮಿಷವನ್ನು ಕೊಟ್ಟಿದ್ದರು. ಉಡುಗೊರೆ ನೀಡಿದ್ದಾರೆ ಎಂಬ ಯಾವ ಅಧಿಕೃತ ಪುರಾವೆಯನ್ನು ಇದುವರೆಗೆ ನೋಡಿಲ್ಲ. ಬಹುಮಾನ ಘೋಷಣೆ ಮಾಡಿದ ಮೇಲೆ ಅದನ್ನು ಗೆದ್ದವರು ಯಾರು? ಅವರಿಗೆ ಬಹುಮಾನ ಕೊಟ್ಟಿರುವ ಬಗ್ಗೆಯೂ ಪ್ರಸಾರ ಮಾಡಬೇಕು.

—ಅನುರಾಧ ಟಿ., ದಾವಣಗೆರೆ

## ಆಚಾರ್ಯರು ಶಾಸ್ತ್ರಿಗಳಲ್ಲ

ದೇಶದಲ್ಲಿ ಶಿವನ ಆರಾಧಕರು, ವಿಷ್ಣುವಿನ ಆರಾಧಕರು ಇದ್ದಾರೆ. ಶಿವನ ಆರಾಧಕರು ವಿಭೂತಿಯನ್ನು ಧರಿಸುತ್ತಾರೆ. ಅವರನ್ನು ಸಾಮಾನ್ಯವಾಗಿ ಶಾಸ್ತ್ರಿಗಳು ಎಂದು ಕರೆಯುವುದು ವಾಡಿಕೆ. ವಿಷ್ಣುವಿನ ಆರಾಧಕರು ಗಂಧಾಕ್ಷತೆ, ಚಕ್ರ ಮತ್ತು ಶಂಖಗಳನ್ನು ಧರಿಸುತ್ತಾರೆ. ಅವರನ್ನು ಆಚಾರ್ಯರೆಂದು ಕರೆಯುವುದು ವಾಡಿಕೆ. ಕಲರ್ಸ್ ಕನ್ನಡದ ‘ನೂರು ಜನ್ಮಕೂ’ ಧಾರಾವಾಹಿಯಲ್ಲಿ ಬಂದಿರುವ ಅತಿಥಿಗಳು ಆಚಾರ್ಯರ ಸಂಪ್ರದಾಯದಂತೆ ಅಲಂಕೃತರಾಗಿದ್ದಾರೆ. ಅವರು ಶ್ರೀನಾರಾಯಣನ ಸ್ಮರಣೆಯನ್ನೂ ಮಾಡುತ್ತಾರೆ. ಆದರೆ ಅವರನ್ನು ಶಾಸ್ತ್ರಿಗಳು ಎಂದು ಸಂಬೋಧಿಸುವುದು ಸಮಂಜಸ ಅನ್ನಿಸುವುದಿಲ್ಲ. ಧರ್ಮಸೂಕ್ಷ್ಮವನ್ನು ಸರಿಯಾಗಿ ನಿರೂಪಿಸಬೇಕು ಎಂದು ಅನ್ನಿಸುತ್ತದೆ.

—ಎಸ್. ವೇದಗರ್ಭ, ಬೆಂಗಳೂರು